<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>

<u>ಸಿ.ಸಿ.ನಂ.523/2019</u>

ಅಸಾಃ 1 (ಚಾಸಾ-2)

| | |
|---|---|
| ಹೆಸರು | ಶೇಖರ ಅಳ್ಳಿಮಟ್ಟಿ |
| ತಂದೆಯ /ಗಂಡನ ಹೆಸರು | ಅಲ್ಲಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಹನಗಂಡಿ |

ದಿನಾಂಕ 02-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-</u>

ನನಗೆ ಚಾಸಾ-1 ಮತ್ತು 3 ರವರ ಪರಿಚಯ ಇರುತ್ತಾರೆ. ದಿನಾಂಕ 10-11-2015 ರಂದು ರಬಕವಿ ಮಹಾಲಿಂಗಪೂರ ನಾಕಾ ಹತ್ತಿರ ಪೋಲಿಸರು ಅಪಘಾತವಾದ ಸ್ಥಳದಲ್ಲಿ ಪಂಚನಾಮೆಗೆಂದು ನನ್ನನ್ನು ಮತ್ತು ಚಾಸಾ3 ರವರನ್ನು ಕರೆಸಿ ಬೆ.9-30 ರಿಂದ 10-30 ರವರೆಗೆ ಸ್ಥಳಪಂಚನಾಮೆ ಮಾಡಿ, ಘಟನಾ ಸ್ಥಳದಿಂದ ಒಂದು ಮೋಟಾರ ಸೈಕಲನ್ನು ಅಮಾನತ್ತು ಮಾಡಿಕೊಂಡು, ಭಾವಚಿತ್ರಗಳನ್ನು ಪಡೆದಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಯು ಸ್ಥಳಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ಘಟನಾ ಸ್ಥಳದಲ್ಲಿ ತೆಗೆದ ಎರಡು ಭಾವಚಿತ್ರಗಳನ್ನು ಮತ್ತು ಅದರಲ್ಲಿರುವ ಬೈಕನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಅಂತಾ ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ವ್ಹಿ ಎಸ್ ವಕೀಲರಿಂದ:-</u>

ಘಟನಾ ಸ್ಥಳಕ್ಕೆ ಪೋಲಿಸರು ನನ್ನನ್ನು ಬರಲು ಹೇಳಿದ್ದರು ಎಂದರೆ ಸರಿಯಲ್ಲ. ನಾನು ಅಲ್ಲಿ ಹಾದುಹೋಗುತ್ತಿದ್ದಾಗ ಪೋಲಿಸರು ನನ್ನನ್ನು ಪಂಚನಾಗಲು ಕರೆದಿರುತ್ತಾರೆ. ನನ್ನನ್ನು ಘಟನಾ ಸ್ಥಳದಲ್ಲಿ ನಿಲ್ಲಿಸಿ ಫೋಟೋಗಳನ್ನು ತೆಗೆದಿರುತ್ತಾರೆಂದರೆ ಸರಿ. ನಂತರ ಅವರು ಕಾಗದದ ಮೇಲೆ ಸಹಿ ಮಾಡಿ ಎಂದು ಹೇಳಿದಾಗ ನಾನು ಅದಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿ. ಸದರಿ ಕಾಗದದಲ್ಲಿ ಬರೆದ ಮಾಹಿತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಅದನ್ನು ಓದಿ ಹೇಳಿದ ನಂತರ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಘಟನಾ ಸ್ಥಳದಲ್ಲಿ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಪೋಲಿಸರು

ಪಂಚನಾಮೆಯನ್ನು ಓದಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಫಿರ್ಯಾದಿದಾರರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.